# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 261/2021**

| | | |
|---|---|---|
| ಸಾಕ್ಷಿದಾರರ ಹೆಸರು | : ನಾಗರಾಜು | ಪಿಡಬ್ಲ್ಯೂ : 10 |
| ತಂದೆಯ / ಗಂಡನ ಹೆಸರು | : ರಂಗಸ್ವಾಮಿ | ಸಿಡಬ್ಲ್ಯೂ : 14 |
| ವಯಸ್ಸು | : 35 ವರ್ಷ | |
| ಉದ್ಯೋಗ | : ಗಾರೆ ಕೆಲಸ | |
| ವಾಸಸ್ಥಳ | : ಬನ್ನಹಳ್ಳಿ, ಟಿ ನರಸೀಪುರ | |

**ಸಾಕ್ಷಿಯನ್ನು ಈ ದಿನ ದಿಃ 18.08.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಆತ ನಮ್ಮ ಮನೆಯ ಪಕ್ಕದವನು. ಸಂಬಂಧಿಕನಲ್ಲ. ಚಾ.ಸಾ. 1 ಆರೋಪಿಯ ಅಣ್ಣ. ಲಕ್ಷಮಮ್ಮ ಆರೋಪಿಯ ತಾಯಿ. ಲಕ್ಷಮಮ್ಮ ಜೀವಂತವಾಗಿ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಏಕೆಂದರೆ ನಾನು ಊರಿಗೆ ಹೋಗುವುದಿಲ್ಲ, ಟಿ ನರಸೀಪುರದಲ್ಲೇ ಕೆಲಸ ಮಾಡಿಕೊಂಡು ಅಲ್ಲೇ ವಾಸ ಮಾಡುತ್ತಿದ್ದೇನೆ. ಮಹೇಶನ ವಿರುದ್ಧ ಈ ಪ್ರಕರಣ ಏತಕ್ಕಾಗಿ ನಡೆಯುತ್ತಿದೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(**ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿ**ದ ಮೇರೆಗೆ, ಪರಿಶೀಲಿಸಿ ಸಕಾರಣಗಳಿದ್ದರಿಂದ, **ಅನುಮತಿ ನೀಡ**ಲಾಯಿತು.)

<u>ಪಾಟೀ ಸವಾಲು ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

2. ನಾನು ಮತ್ತು ಆರೋಪಿ ಒಂದೇ ಜಾತಿಗೆ ಸೇರಿದವರು ಎಂದರೆ ಸರಿ. ನಾವು ಸಂಬಂಧಿಕರು ಎನ್ನುವುದು ಸರಿಯಲ್ಲ. ಬನ್ನಹಳ್ಳಿಯಲ್ಲಿ ಇರುವ ಮನೆಯಲ್ಲಿ ನನ್ನ ತಂದೆ ತಾಯಿ ವಾಸ ಮಾಡುತ್ತಿದ್ದಾರೆ. ನನ್ನ ಹೆಂಡತಿ ಮಕ್ಕಳು ಸಹ ಅಲ್ಲೇ ವಾಸ ಮಾಡುತ್ತಿದ್ದಾರೆ. ನಾನು ಬನ್ನಹಳ್ಳಿಯಿಂದ ಟಿ ನರಸೀಪುರಕ್ಕೆ ಹೋಗಿ ಕೂಲಿ ಕೆಲಸ ಮಾಡಿಕೊಂಡು ಬರುತ್ತೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃನುಡಿಯುತ್ತಾರೆ, ನಾನು ಟಿ ನರಸೀಪುರದಲ್ಲೇ ಬಾಡಿಗೆ ಮನೆ ಮಾಡಿಕೊಂಡು ಕೆಲಸ ಮಾಡಿಕೊಂಡು ಇರುತ್ತೇನೆ ಎಂದು. 3-4 ವರ್ಷಗಳಿಂದ ನಾನು ಟಿ ನರಸೀಪುರದಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದೇನೆ.

3. ಬನ್ನಹಳ್ಳಿಯಲ್ಲಿ ಸುಮಾರು 40 ಮನೆಗಳು ಇವೆ. ಗ್ರಾಮದಲ್ಲಿ ಯಾರಾದರು ತೀರಿಕೊಂಡರೆ ಎಲ್ಲರಿಗೂ ತಿಳಿಯುತ್ತದೆ ಎನ್ನುವುದು ಸರಿ. ಲಕ್ಷಮಮ್ಮ ತೀರಿಕೊಂಡ ವಿಷಯವೂ ಸಹ ನನಗೆ ಗೊತ್ತು.

4. ದಿಃ 29.07.2021 ರಂದು ಸಂಜೆ 06.00 ಗಂಟೆಯ ಸಮಯದಲ್ಲಿ ನಾನು ನಮ್ಮ ಮನೆಯ ಒಳಗೆ ಇದ್ದಾಗ , ಸೋಮಪ್ಪನ ಮನೆಯ ಕಡೆ ಯಾರೋ ಕಿರುಚಿಕೊಂಡ ಶಬ್ದ ಕೇಳಿ ನಾನು ಮನೆಯಿಂದ ಹೊರಬಂದೆ ಎನ್ನುವುದು ಸರಿಯಲ್ಲ. ಆಗ ಸೋಮಪ್ಪನ ಹೆಂಡತಿ ಶಿವಮ್ಮ , ಮಹೇಶನ ಹೆಂಡತಿ ಪಲ್ಲವಿ ಹಾಗೂ ಎದುರು ಮನೆಯ ಮಹದೇವು ರವರು ಸಹ ಮನೆಯಾಳಗಿಂದ ಓಡಿ ಬಂದರು ಎನ್ನುವ ವಿಷಯ ನನಗೆ ಗೊತ್ತಿಲ್ಲ. ಆಗ ಲಕ್ಷಮಮ್ಮ ರಸ್ತೆಯ ಮೇಲೆ ಬಿದಿದ್ದರು , ಅವರ ಮೊಮ್ಮಕ್ಕಳಾದ ಮೋಹನ ಮತ್ತು ಯಶವಂತ್ ರವರು ಅಳುತ್ತಾ ಇದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಾನು ನೋಡಿದಾಗ

ಮಹೇಶ ನಂಜನಗೂಡು ರಸ್ತೆ ಕಡೆಗೆ ನಡೆದುಕೊಂಡು ಹೋಗುತ್ತಿದ್ದ ಎನ್ನುವುದು ಸರಿಯಲ್ಲ. ಆಗ ಹತ್ತಿರ ಹೋಗಿ ನೋಡಿದಾಗ ಲಕ್ಷಮಮ್ಮ ನವರ ಎಡದ ಕಿವಿ ಕೆಳ ಭಾಗ , ಗದ್ದದ ಮೇಲೆ , ಎಡ ಕಣ್ಣಿನ ಪಕ್ಕದಲ್ಲಿ , ಎಡ ಕಿವಿ ಬಳಿ ಕಂದು ಗಟ್ಟಿದ ಗಾಯವಾಗಿ ತಲೆಯ ಹಿಂಭಾಗ ಊದಿಕೊಂಡಂತೆ ಗಾಯವಾಗಿ ಸತ್ತು ಹೋಗಿದ್ದರು, ಎನ್ನುವುದು ಸರಿಯಲ್ಲ. ಆಗ ನಾನು ಅಲ್ಲಿದ್ದ ಮೋಹನ ಮತ್ತು ಯಶವಂತ್ ರವರುಗಳನ್ನು ವಿಚಾರಿಸಿದಾಗ , ಯಶವಂತ ತಾನು ಚಾ.ಸಾ. 1 ರವರ ಬೈಕನ್ನು ತೊಳೆಯುತ್ತಿದ್ದಾಗ , ಮಹೇಶ ಅದನ್ನು ಏಕೆ ತೊಳೆಯುತ್ತಿದ್ದೀಯಾ ಎಂದು ಹೊಡೆಯಲು ಹೋಗುತ್ತಿದ್ದಾಗ ಅಲ್ಲಿದ್ದ ಲಕ್ಷಮಮ್ಮ ಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದುಕೊಂಡು ಯಾಕೆ ಯಶವಂತನಿಗೆ ಹೊಡೆಯಲು ಹೋಗುತ್ತಿದ್ದೀಯಾ ಎಂದು ಕೇಳಿದಾಗ , ಮಹೇಶ ಅದೇ ದೊಣ್ಣೆಯನ್ನು ಕಿತ್ತುಕೊಂಡು ಲಕ್ಷಮಮ್ಮಳಿಗೆ , ನನಗೆ ಸರಿಯಾದ ಟೈಮ್ ಗೆ ಊಟ ಕೊಡೋಲ್ಲ , ಇರೋದು ನೋಡಿದರೆ ನನ್ನ ಮನೆಯಲ್ಲಿ , ನಿಂಗೆ ನನ್ನ ಕಂಡ್ರೆ ಆಗಲ್ಲ , ನಿನ್ನ ಹಿರಿ ಮಗ ಮತ್ತು ಅವನ ಮಕ್ಕಳು ಎಂದರೆ ತುಂಬಾ ಇಷ್ಟ , ಇರು , ನಿಂಗೆ ಇವತ್ತು ಒಂದು ಗತಿ ಕಾಣಿಸ್ತೀನಿ ಎಂದು ಹೇಳಿ ದೊಣ್ಣೆಯಿಂದ ಲಕ್ಷಮಮ್ಮನ ತಲೆಗೆ ಹೊಡೆದಾಗ ಆಕೆ ರಸ್ತೆಯ ಮೇಲೆ ಬಿದ್ದು ಸತ್ತು ಹೋದಳು ಎಂದು ತಿಳಿಸಿದರು ಎನ್ನುವುದು ಸರಿಯಲ್ಲ. ಈ ರೀತಿಯಲ್ಲಿ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. "ದಿಃ 29.07.2021 ರಂದು ......... ಸತ್ತು ಹೋದ ವಿಚಾರ ಗೊತ್ತಾಯಿತು" ಎಂದು ಪೋಲೀಸರ ಮುಂದೆ ನಿಪಿ 14 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ.

5. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ, ಈಗ ಮಹೇಶನೊಂದಿಗೆ ಶಾಮೀಲಾಗಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಹಾಜರಿರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**